**ಇತರೆ ಉದ್ದೇಶಗಳಿಗೆ ವಿದೇಶಿ ವಿನಿಮಯದ ರವಾನೆ (ಇರಸಾಲು)**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 54 (ನವೆಂಬರ್ 25, 2002)**

**ಭಾರತೀಯ ರಿಸರ್ವ್ ಬ್ಯಾಂಕ್**
**ವಿದೇಶಿ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ-400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 54 ನವೆಂಬರ್ 25,2002

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳಿಗೆ,

ಮಾನ್ಯರೇ,

ಇತರೆ ಉದ್ದೇಶಗಳಿಗೆ ವಿದೇಶಿ ವಿನಿಮಯದ ರವಾನೆ (ಇರಸಾಲು)

ಮುಂದಿನ ಸೂಚನೆಗಳನ್ನು ನೀಡುವ ನಿರೀಕ್ಷೆಯಲ್ಲಿ, ಸುತ್ತೋಲೆಯ 1ನೇ ಅನುಬಂಧದಲ್ಲಿ ಪಟ್ಟಿ ಮಾಡಿರುವ ವಿಷಯಗಳಿಗೆ ಸಂಬಂಧಿಸಿದಂತೆ ವಿದೇಶಿ ವಿನಿಮಯ ನಿಯಂತ್ರಣ ಕೈಪಿಡಿ (1993ರ ಆವೃತ್ತಿ) ಯ ಗಿ ಉಪಬಂಧಗಳನ್ನು ಅನುಸರಿಸುವಂತೆ ಅಧಿಕೃತ ವ್ಯಾಪಾರಿಗಳಿಗೆ ಸಲಹೆ ನೀಡಿಹೊರಡಿಸಿರುವ ದಿನಾಂಕ 16, 2000ದ ಎ.ಡಿ (ಎಂ.ಎ ಶ್ರೇಣಿ) ಸುತ್ತೋಲೆ ಸಂಖ್ಯೆ 11ರ 3ನೇ ಪ್ಯಾರಾದ ಕಡೆಗೆ ಅವರ ಗಮನವನ್ನು ಸೆಳೆಯಲಾಗಿದೆ.

2. ಈ ವಿಷಯವನ್ನು ಪುನರಾವಲೋಕಿಸಲಾಗಿದೆ ಮತ್ತು ಈ ಸುತ್ತೋಲೆಯ ಅನುಬಂಧದಲ್ಲಿ ಸೂಚಿಸಿರುವ ಇತರ ಉದ್ದೇಶಗಳಿಗೆ ವಿದೇಶಿ ವಿನಿಮಯವನ್ನು ರವಾನಿಸಲು ಅಧಿಕೃತ ವ್ಯಾಪಾರಿಗಳಿಗೆ ಅನುಮತಿಸಬಹುದಾಗಿದೆ. ವಿದೇಶಿ ವಿನಿಮಯ ನಿಯಂತ್ರಣ ಕೈಪಿಡಿ (1993ರ ಆವೃತ್ತಿ) ಯ 8ನೇ ಅಧ್ಯಾಯದ ಬಿ ಮತ್ತು ಸಿ ಭಾಗದಲ್ಲಿ ಒಳಗೊಂಡಿರುವ ಸೂಚನೆಗಳನ್ನು ಅನುಬಂಧದಲ್ಲಿ ಒಳಗೊಂಡಿರುವ ನಿರ್ದೇಶನಗಳು ರದ್ದುಪಡಿಸುತ್ತವೆ.

3. ಅಧಿಕೃತ ವ್ಯಾಪಾರಿಗಳು ಈ ಸುತ್ತೋಲೆಯಲ್ಲಿನ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ದಯವಿಟ್ಟು ತರುವುದು.

4. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999ರ (1999ರ 42) ಪ್ರಕರಣದ 10(4) ಮತ್ತು ಪ್ರಕರಣ 11(1)ರ ಅಡಿಯಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,
ಗ್ರೇಸ್ ಕೋಶಿ
ಮುಖ್ಯ ಪ್ರಧಾನ ವ್ಯವಸ್ಥಾಪಕರು.